ಸ್ಫೂರ್ತಿ ಕಥನ



ವಿಜಯಪುರ ಹರಣಶಿಕಾರಿ ಓಣಿ

# ಪ್ರೋತ್ಸಾಹ ಸಿಕ್ಕರ ಬಡವ್ರ ಮಕ್ಳು ಬೆಳಿತಾವ್...

**ವಿಜಯಪುರದ ಗೋಲ್ ಗುಂಬಜ್‌ಗೆ ಕೂಗಳತೆ ದೂರದಲ್ಲಿರುವ ಸೆಟ್ಲ್‌ಮೆಂಟ್ ಓಣಿಯ ಶಾಲಾ ಮೈದಾನವೇ ವಾಸುದೇವ ಕಾಳೆ ಮತ್ತು ಅವರ ಮಕ್ಕಳಿಗೆ ಪ್ರಯೋಗಶಾಲೆ. ಅಪ್ಪನ ಗರಡಿಯಲ್ಲಿ ಪಳಗಿದ ಮಕ್ಕಳದೀಗ ರಾಷ್ಟ್ರಮಟ್ಟದಲ್ಲಿ ಹೆಸರು.**

■ ಸುಬ್ರಮಣ್ಯ ಎಚ್.ಎಂ.

ಆದಿನ ಬೆಳ್ಳಂಬೆಳಿಗ್ಗೆ ವಿಜಯಪುರ ಹರಣಶಿಕಾರಿ ಸೆಟ್ಲ್‌ಮೆಂಟ್ ಓಣಿಯ ಕೆಲವರು ಎದುರಿಗೆ ಇರೋ ಸುಂದರೇಶ ಗುಡಿಗೆ ನಮಸ್ಕಾರ ಮಾಡಿ ಕೂಲಿ ಕಾಯಕಕ್ಕೆ ಹೊರಟಿದ್ದರು.

ಅಲ್ಲೇ ಸೆಟ್ಲ್‌ಮೆಂಟ್ ಗೋಡೆಗೆ ಅತುಕೊಂಡಿರುವ ಸರ್ಕಾರಿ ಶಾಲೆ ಮೈದಾನದಲ್ಲಿ ಆ ತಂದೆ ಮತ್ತು ಅವರ ನಾಲ್ವರು ಮಕ್ಕಳ ದೈಹಿಕ ಕಸರತ್ತು ಜೋರಾಗಿಯೇ ನಡೆದಿತ್ತು. ಆ ನಾಲ್ವರು ಯುವ ಆಟಗಾರರಿಗೆ ಹರಿದ ಹಾಸಿಗೆಯೇ ಮ್ಯಾಟ್! ಮೈದಾನದ ಕಲ್ಲು–ಮಣ್ಣು ಹುಲ್ಲುಹಾಸು!

ಶಾಲೆಯ ಮೈದಾನದಲ್ಲಿ ತಮ್ಮ ಮಕ್ಕಳಾದ ಅಶ್ವಿನಿ, ಚೈತ್ರಾ, ತನುಶ್ರೀ, ಮಗ ಅಭಿಷೇಕನಿಗೆ ಜುಡೊ ಆಟದ ಪಟ್ಟುಗಳನ್ನು ಕಲಿಸುತ್ತಾ ವಾಸುದೇವ ಕಾಳೆ ಅಭ್ಯಾಸದಲ್ಲಿ ನಿರತರಾಗಿದ್ದರು. ಮಕ್ಕಳು ಅಭ್ಯಾಸದಲ್ಲಿ ಮೈಮರೆತರೆ ಖಡಕ್ ಮಾತಿನಿಂದಲೇ ಎಚ್ಚರಿಸುತ್ತಿದ್ದರು.

ಹೀಗೆ, ಪ್ರತಿ ಮುಂಜಾನೆ ದೇಹ ದಂಡಿಸಿ ಕ್ರೀಡಾ ಹುಮ್ಮಸ್ಸು ಕುಂದದಂತೆ ನಾಲ್ವರು ಮಕ್ಕಳ ಮನೋಸ್ಥೈರ್ಯವನ್ನು ಕಾಪಿಟ್ಟದ್ದಾರೆ ವಾಸುದೇವ ಕಾಳೆ. ಈ ನಾಲ್ವರು ಕುಡಿಗಳಿಗೆ ಕ್ರೀಡೆಯಲ್ಲಿ ಅದಮ್ಯ ಉತ್ಸಾಹ. ಸಾಧಿಸುವ ಛಲ, ಛಾತಿ ಎಲ್ಲವೂ ಇದೆ. ಆದರೆ, ಸಮುದಾಯಕ್ಕೆ ಅಂಟಿರುವ ಸಾಮಾಜಿಕ ಕಳಂಕವೇ ಮಗ್ಗುಲಮುಳ್ಳು.

ಗೋಲ್ ಗುಂಬಜ್ ಕೂಗಳತೆ ದೂರದಲ್ಲಿಯೇ ಇದೆ ಹರಣಶಿಕಾರಿ ಓಣಿ ಬ್ರಿಟಿಷ್ ಸೆಟ್ಲ್‌ಮೆಂಟ್ ಏರಿಯಾ. ಬ್ರಿಟಿಷರ ಕಾಲದಲ್ಲಿ ಕ್ರಿಮಿನಲ್ ಟ್ರೈಬ್ ಪಟ್ಟಿಯಲ್ಲಿತ್ತು ಈ ಪ್ರದೇಶ. ಈ ಸಮುದಾಯವನ್ನು ಬಗ್ಗುಬಡಿಯಲು ಆ ಹೊತ್ತಿನ ಬ್ರಿಟಿಷ್ ಸರ್ಕಾರ ಸೆಟ್ಲ್‌ಮೆಂಟ್ ಏರಿಯಾ ನಿರ್ಮಿಸಿ ದಿಗ್ಬಂಧನ ವಿಧಿಸಿತ್ತು. ಈಗ ಕಾನೂನಾತ್ಮಕವಾಗಿ ಕ್ರಿಮಿನಲ್ ಪಟ್ಟಿಯಿಂದ ಹೊರಬಂದಿದೆ. ಆದರೆ, ಸಾಮಾಜಿಕ ಕಳಂಕದ ಹಣೆಪಟ್ಟಿಯಿಂದ ಇಂದಿಗೂ ಹೊರಬರಲು ಸಾಧ್ಯವಾಗಿಲ್ಲ. ಈ ಸಾಮಾಜಿಕ ಸಂಘರ್ಷಕ್ಕೆ ಸುದೀರ್ಘ ಇತಿಹಾಸವೂ ಇದೆ.



ಅಶ್ವಿನಿ ಕಾಳೆ